## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

## Spl.C. 156/2021

**P.W.-6**
**C.W.-24**

| | | |
|---|---|---|
| ಹೆಸರು | : | ಆರ್ ಮಂಜುನಾಥ್ |
| ತಂದೆಯ ಹೆಸರು | : | ಲೇಟ್ ಎ ರಾಜಣ್ಣ |
| ವಯಸ್ಸು | : | 61 ವರ್ಷ |
| ಉದ್ಯೋಗ | : | ನಿವೃತ್ತ ಎಸಿಪಿ , ಬೆಂಗಳೂರು |
| ವಾಸಸ್ಥಳ | : | ಬೆಂಗಳೂರು |

**ದಿನಾಂಕಃ 09.072025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ –**

1. ನಾನು ಜೂನ್ 2019 ರಿಂದ ಸೆಪ್ಟಂಬರ್ 2019 ರವರೆಗೆ ಹೆಚ್ಚುವರಿ ಪ್ರಭಾರ ಪೊಲೀಸ್ ಉಪಧೀಕ್ಷಕರಾಗಿ , ಬ್ರಷ್ಟಾಚಾರ ನಿಗ್ರಹ ದಳ , ಮೈಸೂರು ಕರ್ತವ್ಯ ನಿರ್ವಸಿಹಿರಿರುತ್ತೇನೆ.

2. ದಿ.10.07.2019 ರಂದು ಶ್ರೀ ಹೆಚ್ ಸಿ ಬಸವರಾಜು , ಚಾಲಕ ಕಮ್ ನಿರ್ವಾಹಕ , ಕೆ ಎಸ್ ಆರ್ ಟಿ ಸಿ ಗ್ರಾಮಾಂತರ ಘಟಕ–2 , ಮೈಸೂರು ರವರು ಠಾಣೆಗೆ ಹಾಜರಾಗಿ ಮುದ್ರಿತ ಪಿರ್ಯಾದನ್ನು ಮತ್ತು ಸೇವೆಯನ್ನು ಖಾಯಂಗೊಳಿಸಿದ ಪ್ರತಿಯನ್ನು ಮತ್ತು ವಾರ್ಷಿಕ ವೇತನ ಮಂಜೂರು ಮಾಡಿದ ಆದೇಶದ ಪ್ರತಿಯನ್ನು ಹಾಗೂ ಮೆಮೋರಿ ಚಿಪ್ ನ್ನು ಹಾಜರುಪಡಿಸಿದ್ದು , ಅದನ್ನು ಸ್ವೀಕರಿಸಿ, ಅದನ್ನು ಪರಿಶೀಲಿಸಿಸಲಾಗಿ Account Supervisor ಆದ ಮಂಜುನಾಥ ರವರು ಬಸವರಾಜುರವರಿಗೆ 2011 ರಿಂದ 2019 ರವರಿಗೆ ನೀಡಬೇಕಾದ ಸಂಬಳದ ಬಾಕಿ ಹಣವನ್ನು

ಮಾಡಿಕೊಡಲು 10,000/- ರೂ. ಲಂಚವನ್ನು ಕೇಳಿದ ಬಗ್ಗೆ ದೂರನ್ನು ನೀಡಿರುತ್ತಾರೆ. ಈ ಸಂಬಂದ ಠಾಣಾ ಮೊಕದ್ದಮೆ ಸಂಖ್ಯೆ 6/19 ರಲ್ಲಿ ಕಲಂ 7-ಎ ಪಿಸಿ ಆಕ್ಟ್ 1988(ತಿದ್ದುಪಡಿ ಕಾಯಿದೆ 2018) ರ ಪಡಿಯಲ್ಲಿ ಪ್ರಕರಣ ದಾಖಲಿಸಿ ಷರಾವನ್ನು ಬರೆದಿರುತ್ತೇನೆ. ಸಾಕ್ಷಿಯೂ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.1 ಎಂದು, ಷರಾವನ್ನು ನಿಪಿ.1(ಬಿ) ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಸಿ) ಎಂದು ಗುರುತಿಸಲಾಯಿತು. ದೂರನ್ನು ಸ್ವೀಕರಿಸಿ ಪ್ರ.ವ.ವ. ವನ್ನು ದಾಖಲಿಸಿರುತ್ತೇನೆ. ಸಾಕ್ಷಿಯ ಪ್ರ.ವ.ವ. ವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.30 ಎಂದು , ಸಾಕ್ಷಿಯ ಸಹಿಯನ್ನು ನಿಪಿ.30(ಎ) ಎಂದು ಗುರುತಿಸಲಾಯಿತು. ದೂರುದಾರರು ನೀಡಿದ ದಾಖಲೆಗಳನ್ನು ಕಡತದಲ್ಲಿ ಪುಟ 5 ರಿಂದ 9 ರಲ್ಲಿ ಅಳವಡಿಸಲಾಗಿರುತ್ತದೆ.

3. ದೂರುದಾರರು ನೀಡಿದ ದೂರನ್ನು , ಪ್ರ.ವ.ವ. ವನ್ನು ಮತ್ತು ದಾಖಲೆಗಳನ್ನು ಮುಚ್ಚಿದ ಲಕೋಟೆಯಲ್ಲಿ ಮಾನ್ಯ ನ್ಯಾಯಾಲಯಕ್ಕೆ ಪಿಸಿ-ಯೋಗೇಶ್ ರವರ ಮುಖಾಂತರ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಕಡತಗಳನ್ನು ಮುಂದಿನ ತನಿಖೆಗಾಗಿ ಪಿ.ಐ ಶೇಖರ್ ಚಾಸಾ.25 ರವರಿಗೆ ವರ್ಗಾವಣೆ ಮಾಡಿರುತ್ತೇನೆ.

**ಪಾಟೀಸವಾಲುಃ ಆರೋಪಿಗಳ ಪರ ವಕೀಲರಿಂದಃ -**

4. ದೂರುದಾರರು ದೂರಿನ ಜೊತೆಗೆ ದಾಖಲೆಗಳನ್ನು ನೀಡಿರುತ್ತಾರೆ ಎಂದು ಹೇಳಿದ್ದು , ಸದರಿ ದಾಖಲೆಗಳನ್ನು ಯಾವಾಗ, ಎಲ್ಲಿಂದ, ಯಾರಿಂದ ಪಡೆದುಕೊಂಡಿರುತ್ತಾರೆ ಎಂಬುದನ್ನು ವಿಚಾರಿಸಿರುತ್ತಿರೆಯೇ ಎಂದರೆ ಸಾಕ್ಷಿಯೂ ಅವರು ಕಚೇರಿಯಿಂದ ಪಡೆದುಕೊಂಡ ಬಗ್ಗೆ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ದೂರುದಾರಿಂದ ದೂರನ್ನು ಸ್ವೀಕರಿಸುವ ಮುಂಚೆ ಅವರಿಗೆ ಎಷ್ಟು ವೇತನ ಬರಬೇಕಾಗಿತ್ತು ಮತ್ತು ಯಾವ ಕಾರಣಕ್ಕೆ ತಡವಾಗಿರುತ್ತದೆ ಎಂಬುದನ್ನು ವಿಚಾರಿಸಿರುತ್ತಿರಿಯೇ ಎಂದರೆ ಸಾಕ್ಷಿಯೂ 2011-2019 ರವರಿರೆಗೆ ವೇತನ ಬರಬೇಕಾಗುತ್ತದೆ ಎಂದು ತಿಳಿಸಿರುತ್ತಾರೆ. ಆದರೆ ಯಾವ

**Spl.C.No.156/21**
**P.W.-6**
**C.W.-24**

ಕಾರಣಕ್ಕೆ ತಡವಾಗಿರುತ್ತದೆ ಎಂದು ನಾನು ವಿಚಾರಿಸಿರುವುದಿಲ್ಲ. ದೂರುದಾರರು ದೂರನ್ನು ನೀಡುವ ಕಾಲಕ್ಕೆ ದಾಖಲಾತಿಗಳನ್ನು ನೀಡಿರುತ್ತಾರೆ. ದೂರುದಾರರು ದೂರನ್ನು ದಿ.10.07.2019 ರಂದು ನೀಡಿರುತ್ತಾರೆ ಎಂದು ಹೇಳಿದ್ದು, ಆದರೆ ಜೊತೆಗಿನ ದಾಖಲಾತಿಗಳನ್ನು ದಿ.11.04.2019 ರಂದು ಸ್ವೀರಿಸಿರುವ ಬಗ್ಗೆ ಸಹಿ ಇರುತ್ತದೆ ಎಂದರೆ ಸಾಕ್ಷಿಯೂ ಸದರಿ ದಾಖಲೆಯ ಮೇಲೆ ಸಹಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸ್ವೀಕರಿಸಿದ ದೂರು ಬೆರಳಚ್ಚು ಆಗಿರುತ್ತದೆ ಎಂದರೆ ಸರಿ.

5. ದೂರನ್ನು ನಾನು ನನ್ನ ಮೇಲಧಿಕಾರಿಯರು ಎಲ್ಲರೂ ಸೇರಿ ಪ್ರಕರಣಕ್ಕೆ ಅನುಕೂಲವಾಗುವ ರೀತಿಯಲ್ಲಿ ಬೆರಳಚ್ಚು ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ. ಪ್ರ.ವ.ವ. ವನ್ನು ದಾಖಲಿಸುವ ಕಾಲಕ್ಕೆ ದಾಖಲಾತಿಗಳು ಇದ್ದವು. ಪ್ರ.ವ.ವ. ವನ್ನು ದಿ.10.07.2019 ರಂದು ದಾಖಲಿಸಿದ್ದು, ಆ ಕಾಲಕ್ಕೆ ದಾಖಲಾತಿಗಳು ಇರಲಿಲ್ಲ ಎಂದರೆ ಸರಿಯಲ್ಲ. ಪಿರ್ಯಾದುದಾರರ ಒತ್ತಡದ ಮೇಲೆ ಯಾವುದೇ ವಿಚಾರಣೆ ಮಾಡದೇ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು,
ಮೈಸೂರು.